# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 05-03-2021 ಪ್ರಶ್ನೆ ಸಂಖ್ಯೆ : 603 (754)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 05-03-2021

ಉತ್ತರಿಸುವ ಸಚಿವರು: ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ವಿಷಯ : ಕೈಮಗ್ಗ ಮತ್ತು ಜವಳಿ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ

(ಅ) ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಅನುಷ್ಠಾನ ಗೊಳಿಸಲಾಗುತ್ತಿರುವ ಯೋಜನೆಗಳಾವುವು ; ಈ ಯೋಜನೆಗಳಡಿ ಹಾಸನ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಒದಗಿಸಿರುವ ಅನುದಾನವೆಷ್ಟು ; ಖರ್ಚಾದ ಅನುದಾನವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ನೂತನ ಜವಳಿ ನೀತಿಯ ಪ್ರೋತ್ಸಾಹಧನ ಮತ್ತು ಉತ್ತೇಜನದಡಿ ಸಿವಿಂಗ್ ಮಷಿನ್ ಆಪರೇಟರ್ ತರಬೇತಿಯನ್ನು ನೀಡಲು ಹಾಸನ ಜಿಲ್ಲಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಂಸ್ಥೆಗಳಿಗೆ ಎಷ್ಟು ಎಷ್ಟು ಅನುದಾನ ಒದಗಿಸಲಾಗಿದೆ ; ಎಷ್ಟು ಜನರಿಗೆ ಪ್ರತಿ ವರ್ಷ ತರಬೇತಿ ನೀಡಲಾಗಿದೆ ; ತರಬೇತಿ ಪಡೆದವರ ವಿವರ ಹಾಗೂ ಪ್ರತಿ ತರಬೇತಿಗೆ ಖರ್ಚು ಮಾಡಿರುವ ಹಣದ ವಿವರವನ್ನು ತಾಲ್ಲೂಕುವಾರು, ವಾರ್ಷಿಕವಾರು, ತರಬೇತಿ ಸಂಸ್ಥೆವಾರು ವಿವರ ನೀಡುವುದು ;

(ಇ) ಕಳೆದ 3 ವರ್ಷಗಳಲ್ಲಿ ನೇಕಾರರಿಗಾಗಿ ಯಾವುದಾದರು ವಿಶೇಷ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆಯೇ ; ರೂಪಿಸಿದ್ದಲ್ಲಿ, ಅವುಗಳ ವಿವರ ನೀಡುವುದು ?